ಅಧ್ಯಕ್ಷರು.—ಯಾವ ಮುನಿಸಿಪಾಲಿಟಿಗಳಲ್ಲೂ ಸದಸ್ಯರು ಈ ರೀತಿ ನಡೆದುಕೊಳ್ಳುವುದಿಲ್ಲ. ಅಂಥ ಒಂದು ರೀತಿಯಲ್ಲಿ ಇಲ್ಲಿ ನಡೆದುಕೊಳ್ಳುತ್ತಿದ್ದೀರಿ.

ಶ್ರೀ ಪಂಪಾಪತಿ.—ಸ್ವಾಮಿ, ಈ ವಿಚಾರ ಮಾನ್ಯ ಲೇಬರ್ ಕಮಿಷನರ್‌ರವರ ಮುಂದೆ ತೀರ್ಮಾನ ವಾಗಿರುವುದರಿಂದ ನಾನು ತಮ್ಮನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ನಿಮ್ಮ ವರ್ತನೆ ನನಗೆ ಹಿಡಿಸುವುದಿಲ್ಲ. ತಾವು ಈ ರೀತಿ ಪದೇ ಪದೇ ಎದ್ದುನಿಂತು ಸಭೆಯ ಕಾರ್ಯಕಲಾಪಗಳಿಗೆ ಅಡಚಣೆ ಉಂಟುಮಾಡುವುದಾದರೆ ತಮ್ಮ ಹೆಸರನ್ನು ನಾನು ಸೂಚಿಸ ಬೇಕಾಗುತ್ತದೆ.

ಶ್ರೀ ಜೀವರಾಜ್ ಆಳ್ವ.—ಸ್ವಾಮಿ, ನಿನ್ನೆಯ ದಿವಸ ನಾನು ಸಹಿ ಮಾಡಿ ಕಳಿಸಿರುವ ನೋಟೀಸಿಗೆ ಸರಿಯಾದ ಉತ್ತರವನ್ನು ಮಾನ್ಯ ಸಚಿವರಿಂದ ಕೊಡಿಸಬೇಕು. ಅಲ್ಲಿ ೨ ಸ್ಟ್ರೈಕ್‌ಗಳು ನಡೆಯುತ್ತಿವೆ.....

ಅಧ್ಯಕ್ಷರು.—ತಮ್ಮಂತೆಯೇ ಮಾನ್ಯ ಲಕ್ಷ್ಮೀಸಾಗರ್‌ರವರೂ ಹಾಗೂ ಇತರೆಯವರೂ ರುಜು ಹಾಕಿ ನೋಟೀಸ್‌ಗಳನ್ನು ಕಳುಹಿಸಿಕೊಟ್ಟಿದ್ದಾರೆ. ಆದರೆ ಈ ವಿಚಾರ ಮಾನ್ಯ ಮುಖ್ಯ ಮಂತ್ರಿ ಯವರಿಗೆ ಸಂಬಂಧಪಟ್ಟಿದ್ದು ಅವರು ಸದನದಲ್ಲಿಲ್ಲದೇ ಇರುವುದರಿಂದ ಬೇರೊಂದು ದಿವಸ ನಿಮಗೆ ಉತ್ತರ ಕೊಡಿಸುತ್ತೇನೆ.

SRI JEEVARAJ ALWA.—It is a bigger agitation. Let the matter be solved early. Sheshadripuram & St. Joseph's College people are on strike. Why are you exploiting the situation ? ಇವತ್ತು, ನಾಳೆ, ಎಂದರೆ ಇನ್ನೂ ಜಾಸ್ತಿ ವಿಕೋಪಕ್ಕೆ ಹೋಗಬಹುದು. It is a very very vital subject.

ಅಧ್ಯಕ್ಷರು.—ಸೋಮವಾರದ ಕಾರ್ಯಕ್ರಮದ ಪಟ್ಟಿಯಲ್ಲಿ ತಮ್ಮ ವಿಷಯವನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

(೬) ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆಯ ದಿವಸ ತಮಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳಿಸಿಕೊಟ್ಟಿದ್ದೆ. ಅದಕ್ಕೆ ಮಾನ್ಯ ಸಚಿವರಿಂದ ಉತ್ತರವನ್ನು ಕೊಡಿಸ ಬೇಕು.

ಅಧ್ಯಕ್ಷರು.—ಅದು ಏನು ಎಂಬುದನ್ನು ನಾನು ನೋಡುತ್ತೇನೆ.

CALLING ATTENTION TO A MATTER OF URGENT PUBLIC IMPORTANCE

re.—Recoveries of Co-operative loans given to Agriculturists of Kolar District and particularly of Malur Taluk.

SRI P. N. REDDY.—Sir, I call the attention of the Hon· Minister for Co-operation to the recoveries of Co-operative Loans given to Agriculturists of Kolar district and particularly of Malur Taluk.

SRI A. B. JAKANUR (Minister for Co-operation) —Sir, I wish to make the following statement.—

Whenever there is a failure of crop, the Deputy Commissioner of the District declares the annewari on the basis of crop cutting It experiments to be below six annas, short term loans are converted

nto medium term loans and the recovery of instalments is postponed. is now ascertained that the Deputy Commissioner, Kolar has declared 158 villages in Malur taluk and 40 villages in Bagepalli taluk as draught affected areas. Of the 158 villages in Malur Taluk, 107 villages are reported to have been declared as with average crop yeild below 37.5%. The order of the D.C Kolar notifying the failure of crops during the year 79-80 due to inadequate rain-fall in these villages will be in vogue from 1-7-1979 to 30th June 1980.

All the societies covering the villages notified by the Deputy Commissioner will have to apply to the District Central Co-op. Bank Kolar requesting for conversion of short term loan into medium term loan if recoveries are to be postponed. So far, no society in Malur and Bagepally have approached the D.C.C. Bank Kolar with such a request to convert the short term loan into medium term loan. Hence, the Deputy Registrar CS Kolar District Kolar has been advised to take immediate steps to see that the concerned societies apply for the required relief to the D.C.C. Bank Ltd,, Kolar and he has informed concerned Societies to apply for conversion. On receipt of the application from the societies, the D.C.C. Bank will take steps for conversion of short term loans into medium term loans. In view of the fact that Deputy R.C.S. Kolar has already taken action to convert S.T. loan to M.T. Loan wherever Annevari is declared by D.C. below 6 Annas, it is not necessary to stop recovery of Co op. dues.

ಶ್ರೀ ಪಿ. ಎನ್. ರೆಡ್ಡಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರವೇನೋ ಸಮಂಜಸವಾಗಿದೆ. ಆದರೆ ಅದರಂತೆ ಕ್ರಮತೆಗೆದುಕೊಂಡಿದ್ದಾರೆಯೆ ? ಎಂದು ನಾನು ಕೇಳಬೇಕಾಗಿದೆ. ಏಕೆಂದರೆ, ಅವರ ಹೇಳಿಕೆಯಲ್ಲಿ ಈಗಾಗಲೇ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೂ ಯಾವ ಕ್ರಮವನ್ನೂ ಇವರು ತೆಗೆದುಕೊಂಡಂತೆ ಕಾಣುತ್ತಿಲ್ಲ, ನಾನು ಒಂದು ವಿಷಯವನ್ನು ಮಾತ್ರ ಬಹಳ ವಿಷಾದದಿಂದ ಹೇಳಬೇಕಾಗಿದೆ.ಏನೆಂದರೆ,ಡಿ.ಸಿ.ಸಿ. ಬ್ಯಾಂಕ್‌ನವರು ಮತ್ತು ಪಿ.ಎಲ್ ಡಿ. ಬ್ಯಾಂಕ್‌ನವರು ಇವತ್ತು ಕಲಿಯುಗದ ರಾಕ್ಷಸರಾಗಿದ್ದಾರೆ. ಉದಾಹರಣೆಗೆ ಹೇಳಬೇಕೆಂದರೆ,ಹರಿಜನರ ಮನೆಗೆ ಈ ಅಧಿಕಾರಿಗಳ ನುಗ್ಗಿ ಬಾಗಿಲುಗಳನ್ನು ಕಿತ್ತುಕೊಂಡು ಬಂದಿದ್ದಾರೆ. ಆ ಬಡವರು ಕೊಡಬೇಗಿದ್ದ ೩೦೦ ರೂ. ಗಳ ಬಾಕಿಗೆ ಳಿ ಕುರಿಗಳನ್ನು ಹೊಡೆದುಕೊಂಡು ಬಂದು ಹರಾಜು ಹಾಕಿದ್ದಾರೆ. ಇವತ್ತು ಒಂದೊಂದು ಕುರಿಯೂ ೧೫೦-೨೦೦ ರೂ. ಗಳನ್ನು ಬಾಳುತ್ತವೆ. ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ " ಇದರ ಬಗ್ಗೆ ಸೂಕ್ತ ಕ್ರಮತೆಗೆದುಕೊಳ್ಳಲಾಗಿದೆ. " ಎಂದು ಹೇಳಿದ್ದಾರೆಯೇ ಹೊರತು ಯಾವ ದಿವಸ ಕ್ರಮತೆಗೆದುಕೊಳ್ಳಲಾಗಿದೆ ಎಂಬುದನ್ನು ತಿಳಿಸಿಲ್ಲ. ನಿನ್ನೆಯ ದಿವಸ ಬ್ಯಾಂಕ್‌ನ ಡಿಸ್ಟ್ರಿಕ್ಟ್ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಬಾಕಿ ವಸೂಲಿಗೆ ಹೋಗುತ್ತಿದ್ದವರನ್ನು ನಾನು ಭೇಟಿ ಮಾಡಿ, ಈ ಬಡ ಜನರಿಂದ ಬಾಕಿ ವಸೂಲಿಮಾಡಬಾರದೆಂದು ನಿಮಗೆ ಡೆಪ್ಯೂಟಿ ಕಮಿಷನರ್‌ರವರಿಂದ ಇನ್‌ಸ್ಟ್ರಕ್ಷನ್ ಬಂದಿಲ್ಲವೆ ? ಎಂದು ಕೇಳಿದಾಗ, ಅದು ಬಂದಿದೆಯೋ, ಇಲ್ಲವೋ, ಗೊತ್ತಿಲ್ಲ. ನೋಡಬೇಕಾಗಿದೆ ಎಂದು ಅವರು ಹೇಳಿದರು. ಆದ್ದರಿಂದ ಮಾನ್ಯ ಸಚಿವರು ಯಾವ ದಿವಸ ಈ ಇನ್‌ಸ್ಟ್ರಕ್ಷನನ್ನು ಕಳುಹಿಸಿಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು.

ಶ್ರೀ ಎ. ಬಿ. ಜಕನೂರ್ .— ನಾವು ಹಿಂದೆಯೆ ಒಂದು ಡೈರೆಕ್ಷನ್ ಕೊಟ್ಟು, ಅಧಿಕಾರಿಗಳಿಗೆ ತಿಳಿವಳಿಕೆ ನೀಡಿದ್ದೇವೆ. ಆದರೆ ಅವರು ಈ ಸಹಕಾರ ಸಂಘದವರಿಗೆ ಆದೇಶ ಕೊಟ್ಟಿಲ್ಲವೆಂದು ಕಾಣುತ್ತದೆ. ಅಲ್ಲದೆ ಷಾರ್ಟ್ ಟರ್ಮ್ ಲೋನನ್ನು ಮೀಡಿಯಂ ಟರ್ಮ್ ಲೋನ್ ಎಂದು ಮಾಡುವ ಪದ್ಧತಿ ಇಟ್ಟುಕೊಂಡಿದ್ದೇವೆ. ಈಗ ಬಾಕಿ ವಸೂಲಿ ಮಾಡುತ್ತಿರುವುದರಿಂದ ಯಾರಿಗಾದರೂ ಬಹಳ ತ್ರಾಸವಾಗಿದ್ದಲ್ಲಿ ಅದನ್ನು ನಮಗೆ ತಿಳಿಸಿದರೆ, ಅದರ ಬಗ್ಗೆ ಗಮನ ಹರಿಸುತ್ತೇವೆ. ಮತ್ತು ಇನ್ನು ಮುಂದೆ ಈ ರೀತಿ ಬಡವರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುತ್ತೇವೆ.

೧–೩೦ ಪಿ. ಎಂ.

ಸೊಸೈಟಿ ಅಧಿಕಾರಿಗಳು ಮಾಡುವ ತಪ್ಪಿಗೆ ರೈತರು ಗುರಿಯಾಗಬೇಕಾಗಿದೆ: ಏನು ೧೬೮ ಹಳ್ಳಿಗಳಿಗೆ ಈ ಕಂದಾಯ ಮಾಫಿ ಮಾಡಿದ್ದೀರಿ. ಆದೇ ರೀತಿ ಪೂರ್ತಿ ತಾಲ್ಲೂಕಿನಲ್ಲಿ, ಕೇವಲ ೪೦ ಹಳ್ಳಿಗಳು ಇವೆ, ಆ ಹಳ್ಳಿಗಳಿಗೂ ಕಂದಾಯವನ್ನು ವಜಾ ಮಾಡಿದರೆ ಅನುಕೂಲವಾಗುತ್ತದೆ. ಜೊತೆಗೆ ಅಲ್ಲಿಯೂ ಕೂಡ ೩೦ ಪರ್ಸೆಂಟ್ ಕಡಿಮೆ ಬೆಳೆಯಾಗಿದೆ, ಆದರೆ ರೆವಿನ್ಯೂ ಅಧಿಕಾರಿಗಳು ಯಾವುದನ್ನು ಕೇಳಿದರೂ ಸರಿಯಾದ ಉತ್ತರವನ್ನು ಕೊಡುತ್ತಿಲ್ಲ. ಆದ್ದರಿಂದ ದಯಮಾಡಿ ೧೬೮ ಹಳ್ಳಿಗಳಿಗೆ ಅನ್ವಯವಾಗುವ ಹಾಗೆ ಮಾಡಿರುವ ಆಜ್ಞೆಯನ್ನು ಪೂರ್ತಿ ತಾಲ್ಲೂಕಿಗೆ ಅನ್ವಯಿಸುವಂತೆ ಆಶ್ವಾಸನೆ ಕೊಡುತ್ತೀರಾ?

ಶ್ರೀ ಎ. ಬಿ. ಜಕನೂರ್ .— ಪೂರ್ತಿ ತಾಲ್ಲೂಕಿಗೆ ಇದನ್ನು ಅನ್ವಯಿಸಲಿಕ್ಕೆ ಬರುವುದಿಲ್ಲ. ಎಲ್ಲಿ ಆರು ಆಣೆಗಿಂತ ಬೆಳೆ ಕಡಿಮೆಯಾಗಿದೆ ಎಂದು ರೆವಿನ್ಯೂ ಅಧಿಕಾರಿಗಳು ತಿಳಿಸಿದ್ದಾರೋ ಅಲ್ಲಿಗೆ ಮಾತ್ರ ಇದನ್ನು ಅನ್ವಯಿಸಲಿಕ್ಕೆ ಸಾಧ್ಯ.

ಶ್ರೀ ಬಿ.ಎಂ. ಗೋವಿಂದಗೌಡ.—ನಮ್ಮ ತಾಲ್ಲೂಕಿನಲ್ಲಿ ಜಾಸ್ತಿಯಾಗಿ ಸೆರಿಕಲ್ಚರ್ ಕಂ ಅಗ್ರಿಕಲ್ಚರ್ ಎನ್ನುವ ರೀತಿ ವ್ಯವಸಾಯವಾಗಿರುವುದರಿಂದ, ಅಲ್ಲಿ ಬೂದಿ ನೊಣದಿಂದ ಬೆಳೆ ನಷ್ಟವಾಗಿರುವುದರಿಂದ ಸರ್ಕಾರದವರೇ ಇದರಿಂದ ಆದಾಯವಿಲ್ಲ ಇದು ಆರು ಆಣೆ ಬೆಳೆಗಿಂತ ಕಡಿಮೆ ಉತ್ಪತ್ತಿ ಕೊಡುವಂತಾದ್ದು ಅಲ್ಲವೆಂದು, ಡಿ. ಸಿ. ಸಿ, ಬ್ಯಾಂಕ್‌ನವರಿಗೆ ತಿಳಿಸಿದ್ದಾರೆ. ಆದರೂ ಡಿ. ಸಿ. ಸಿ. ಬ್ಯಾಂಕಿನ ಎಂಪ್ಲಾಯೀಸ್ ಅವರು ಲೋಕಲ್‌ನವರಾಗಿರುವುದರಿಂದ, ಅಲ್ಲಿ ರಾಜಕೀಯದಲ್ಲಿ ಇನ್‌ವಾಲ್ವ್ ಆಗಿ ಎಲ್ಲವನ್ನೂ ಷಾರ್ಟೇಜ್ ತೋರಿಸಬೇಕಾಗುತ್ತದೆ. ಆದುದರಿಂದ ಸರ್ಕಾರದವರು ಕೊಲಾರ ಜಿಲ್ಲೆಯ ರೈತರು ಬೂದಿ ನೊಣದ ಹಾವಳಿಯಿಂದ ನೊಂದಿರುವುದರಿಂದ ಎಲ್ಲಾ ಎಸ್. ಟಿ. ಲೋನನ್ನು ಎಂ. ಟಿ. ಲೋನ್ ಎಂದು ಮುಂದಕ್ಕೆ ಹಾಕುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಬಿ. ಜಕನೂರ್ .— ರಿಸರ್ವ್‌ಬ್ಯಾಂಕ್ ಸೂಚನೆ ಇರುವುದರಿಂದ ಅದನ್ನು ನಮ್ಮ ಸಹಕಾರ ಇಲಾಖೆ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ಡೆಪ್ಯುಟಿಕಮಿಷನರ್‌ರವರು ಮಾತ್ರ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಡೆಪ್ಯುಟಿ ಕಮಿಷನರ್‌ಗೆ ಅರ್ಜಿ ಕೊಟ್ಟು ಅವರು ಇದರ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿದ್ದರೆ ಆಮೇಲೆ ಡಿ. ಸಿ. ಸಿ ಬ್ಯಾಂಕಿನವರಿಂದ ರಿಯಾಯಿತಿ ಪಡೆಯಬಹುದು.

ಶ್ರೀ ಗೋವಿಂದ ಗೌಡ.—ಬೂದಿ ನೊಣದಿಂದ ನಷ್ಟವಾಗಿರುವುದರ ಬಗ್ಗೆ ರಿಪೋರ್ಟು ಕೊಟ್ಟಿದ್ದರೂ ಕೂಡ ರೈತರಿಗೆ ಕಾಂಪನ್‌ಸೇಷನ್ ಸಿಕ್ಕುತ್ತಾ ಇಲ್ಲ, ಸರ್ಕಾರದವರೇ ಈ ಬೆಳೆಯನ್ನು ಬೆಳೆಯಬಾರದು ಎಂದು ಹೇಳಿರುವಾಗ ಇದನ್ನು ಡಿಕ್ಲೇರ್ ಏತಕ್ಕೆ ಮಾಡಬಾರದು?

ಶ್ರೀ ಎ. ಬಿ. ಜಕನೂರ್ .— ಡೆಪ್ಯುಟಿ ಕಮಿಷನರ್ ಡಿಕ್ಲೇರ್ ಮಾಡಬೇಕು. ಮಾಡಿದರೆ ಆಮೇಲೆ ಬ್ಯಾಂಕಿನವರು ಕಾರ್ಯ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ.

ಶ್ರೀ ಗೋವಿಂದ ಗೌಡ .— ಡೆಪ್ಯುಟಿ ಕಮಿಷನರ್ ರಿಪೋರ್ಟು ಕಳುಹಿಸಿರುತ್ತಾರೆ. ಆದರೂ ಈ ಸೆಸ್ ಆಫೀಸರ್ ರೈತರ ಕುರಿ, ಕೋಳಿ ಎಲ್ಲವನ್ನೂ ತೆಗೆದುಕೊಂಡು ಬಂದಿರುತ್ತಾರೆ. ಅವರಿಗೆ ಅಡಂಗೆ ಮಾಡಲು ಪಾತ್ರೆಗಳು ಇಲ್ಲ, ಅವನ್ನಾದರೂ ಅವರಿಗೆ ಪಾಪಸ್ ಕೊಡಿಸಲಿಕ್ಕೆ ವ್ಯವಸ್ಥೆ ಮಾಡಿಸುತ್ತೀರಾ ?

ಶ್ರೀ ಎ. ಬಿ. ಜಕನೂರ್ .— ಡೆಪ್ಯುಟಿ ಕಮಿಷನರ್‌ರವರು ಎಲ್ಲಿ ಆರು ಆಣೆಗಿಂತ ಬೆಳೆ ಕಡಿಮೆಯಾಗಿದೆ ಎಂದು ಹೇಳಿದ್ದಾರೆ ಅಂತಹ ಕಡೆ ಜಪ್ತಿ ವಗೈರೆ ಆಗಿದ್ದರೆ, ಅವರು ಬಡವರು ಇದ್ದರೆ, ಅವರ ಹೆಸರುಗಳನ್ನು ಕೊಡಿ ಅವರಿಗೆ ಅನುಕೂಲಮಾಡಿಕೊಡುತ್ತಾರೆ.